(ಸದನವು ಬೆಳಿಗ್ಗೆ 11 ಗಂಟೆಗೆ 10 ನಿಮಿಷಕ್ಕೆ ಸಮಾವೇಶಗೊಂಡಾಗ ಮಾನ್ಯ ಉಪಾಧ್ಯಕ್ಷರು ಪೀಠದಲ್ಲಿ ಉಪಸ್ಥಿತರಿದ್ದರು)

1. ಅಧ್ಯಕರ ಅಪ್ಪಗೆ ಮೇರೆಗೆ ಪ್ರಸ್ತಾಪಿಸಿದ ವಿಷಯ

(ಈ ಹಂತದಲ್ಲಿ ಬಿಜೆಪಿ ಪಕ್ಷದ ಸದಸ್ಯರು ಸದನ ಬಾವಿಯಲ್ಲಿ ಧರಣಿಗೆ ಆಗಮಿಸಿದರು)

ವಿಷಯ: ಕಬ್ಬಿಗೆ ಬಾಕಿ ಹಣ ಪಾವತಿ ಬಗ್ಗೆ ನೀಡಿರುವ ಉತ್ತರದ ಬಗ್ಗೆ

ಉಪಾಧ್ಯಕ್ಷರು:– ನಿನ್ನೆದಿವಸ ಮಾನ್ಯ ಸಚಿವರು ಕಬ್ಬಿನ ಬಾಕಿ ಹಣದ ಬಗ್ಗೆ ಉತ್ತರ ಕೊಟ್ಟಿದ್ದಾರೆ. ತಾವು ಇಲ್ಲಿ ಪ್ರತಿಭಟನೆ ಕೂಡ ಮಾಡಿದ್ದೀರಿ, ಅದು register ಕೂಡ ಆಗಿದೆ. ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ, ಕಲಾಪವನ್ನು ನಡೆಸೋಣ. ನಿನ್ನೆದಿವಸ ಸಾಕಷ್ಟು ಚರ್ಚೆ ಕೂಡ ಮಾಡಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು):– ಮಾನ್ಯ ಸಚಿವರು ನಿನ್ನೆ ದಿವಸ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಉತ್ತರವನ್ನು ಸೋಮವಾರ ಕೊಡುತ್ತೇನೆಂದು ಹೇಳಿದ್ದರು. ಆದರೆ, ನಮ್ಮ ಒತ್ತಾಯಕ್ಕೆ ಮಣಿದು ನಿನ್ನೆದಿವಸ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಸಮಾಧಾನಕರವಾದ ಹೇಳಿಕೆಯನ್ನು ಕೊಡುತ್ತಾರೆಂದು ತಿಳಿದುಕೊಂಡಿದ್ದೆವು. ಆದರೆ, ಅವರು ಕೊಟ್ಟಿರುವ ಹೇಳಿಕೆ ಸಮಾಧಾನಕರವಾಗಿಲ್ಲ ಹಾಗೆಯೇ ಕಬ್ಬು ಬೆಳೆದಂತ ರೈತರು ಬಹಳಷ್ಟು ತೊಂದರೆಯಲ್ಲಿದ್ದಾರೆ. ಅವರ ಕಷ್ಟ ಇವರಿಗೆ ಅರ್ಥವಾಗುತ್ತಿಲ್ಲ. ಮತ್ತೆ ವಸೂಲಿ ಮಾಡುವುದರಲ್ಲಿ ಒಟ್ಟು ತಾರತಮ್ಯ ಮಾಡುತ್ತಿದ್ದಾರೆ. ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಇವರಿಗೆ power ಇದೆ. ಆದರೆ, ಆ ಕಾನೂನನ್ನು ಉಪಯೋಗ ಮಾಡುತ್ತಿಲ್ಲ. ಕಾರ್ಖಾನೆಗಳ ಗೋದಾಮಿನಲ್ಲಿ ಸಕ್ಕರೆ ಇಲ್ಲದಿರುವ ಕಡೆ ಜಪ್ತಿ ಮಾಡಿದ್ದಾರೆ.

(ಮುಂದಲ)

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಉಪಾಧ್ಯಕ್ಷರೆ, ಅವರ ಪಕ್ಷದವರಿಗೆ ಸೇರಿರುವ ಸಕ್ಕರೆ ಕಾರ್ಖಾನೆಗಳು ಇನ್ನೂ payment ಮಾಡಿಲ್ಲ, ಅವರೇ arrears ಉಳಿಸಿಕೊಂಡಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು:– ನಿನ್ನೆದಿವಸ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಶಿವಮೂರ್ತಿಯವರೇ, ತಾವು ರೈತರ ವಿರೋಧಿಯೇ?

ಶ್ರೀ ಕೆ. ಶಿವಮೂರ್ತಿ:– ಕಾಂಗ್ರೆಸ್ ಪಕ್ಷ ಯಾವತ್ತೂ ಕೂಡ ರೈತರ ಪರವಾಗಿ ಇರುತ್ತದೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ಬಿಜೆಪಿ ಪಕ್ಷದಲ್ಲಿರುವವರು ಸಾಕಷ್ಟು arrears ಅನ್ನು ಉಳಿಸಿಕೊಂಡಿದ್ದಾರೆ. ಆದರೆ, ಅವರೇ ಇಲ್ಲಿ ಧರಣಿ ಮಾಡುತ್ತಿದ್ದಾರೆ. ಆದ್ದರಿಂದ, ಸದನದಲ್ಲಿ ಈ ರೀತಿಯ ದ್ವಂದ್ವ ನೀತಿಯನ್ನು ನಾವು ಖಂಡಿಸುತ್ತೇವೆ. ಈ ರೀತಿಯಾದಂಥ ನಾಟಕ ಮಾಡತಕ್ಕಂಥ ನೀತಿ ಸರಿಯಲ್ಲ.

(ಗೊಂದಲ)

ಉಪಾಧ್ಯಕ್ಷರು:– ಮಾನ್ಯ ಜಗದೀಶ್ ಶೆಟ್ಟರ್‌ರವರೇ, ಇವತ್ತು ಚರ್ಚೆಗೆ ಕೊನೆಯ ದಿವಸ ಆದ್ದರಿಂದ, ಚರ್ಚೆಗೆ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಶಿವಮೂರ್ತಿಯವರೇ, ತಾವು ರೈತರ ವಿರೋಧಿಯೇ?

ಶ್ರೀ ಕೆ. ಶಿವಮೂರ್ತಿ:– ನಾನು ರೈತ, ನಮ್ಮ ಕಾಂಗ್ರೆಸ್ ಪಕ್ಷ ರೈತರ ಪರವಾಗಿ ನಿಲ್ಲುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ:– ಹಾಗಾದರೆ, ನೀವು ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳು ಸುಮ್ಮನೆ ಕುಳಿತಿರುವಾಗ ನೀವೇಕೆ ಎದ್ದು ಮಾತನಾಡುತ್ತೀರಿ? ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಕೆ. ಶಿವಮೂರ್ತಿ:– ಬಿಜೆಪಿ ಪಕ್ಷದಲ್ಲಿರುವವರು ಇನ್ನೂ arrears ಕೊಟ್ಟಿಲ್ಲ. ಈ ಸದನದಲ್ಲಿ ಕಳಕಳಿ ಪ್ರಾರ್ಥನೆ ಮಾಡುವುದೇನೆಂದರೆ, ಇವತ್ತು ಇಲ್ಲಿ ಯಾರು ಧರಣಿ ಮಾಡುತ್ತಿದ್ದಾರೆಯೋ ಆ ಪಕ್ಷದವರೇ ರೈತರಿಗೆ ಬಾಕಿ ಹಣವನ್ನು ಕೊಡುವುದಕ್ಕೆ ಆಗದೆ ಕುಳಿತುಕೊಂಡಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಿವಮೂರ್ತಿಯವರು ಮಂತ್ರಿಗಳಲ್ಲ. ಆದ್ದರಿಂದ, ಅವರು ಉತ್ತರ ಕೊಡಬಾರದು. ಮಾನ್ಯ ಮಂತ್ರಿಗಳು ದಯವಿಟ್ಟು ಸದನದಲ್ಲಿ ಉತ್ತರ ಕೊಡಬೇಕು.

ಶ್ರೀ ಕೆ. ಶಿವಮೂರ್ತಿ:– ಅವರ ಕಡೆಯವರದ್ದು ಇನ್ನೂ payment ಬಾಕಿ ಇದೆ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಉಪಾಧ್ಯಕ್ಷರೆ, ಅವರು ಮಂತ್ರಿಗಳಲ್ಲ. ಆದ್ದರಿಂದ, ಉತ್ತರ ಕೊಡಬಾರದೆಂದು ಅವರಿಗೆ ಹೇಳಿ. ಮಾನ್ಯ ಶಿವಮೂರ್ತಿಯವರೆ, ನೀವು ರೈತರ ವಿರೋಧಿಯೇ?

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಕಾರಜೋಳರವರೇ, ಇದು ನಮಗೆ ನಿಮಗೆ ಸಂಬಂಧ ಇಲ್ಲ. ಇದು ರೈತರಿಗೆ ಸಂಬಂಧಪಟ್ಟ ವಿಚಾರವಾಗಿದೆ. ಬಾಕಿ ಉಳಿಸಿಕೊಂಡಿರುವವರು ನಿಮ್ಮ ಪಕ್ಷದಲ್ಲಿ ಎಷ್ಟು ಜನರಿದ್ದಾರೆ, ನಮ್ಮ ಪಕ್ಷದಲ್ಲಿ ಎಷ್ಟು ಜನರಿದ್ದಾರೆಂಬುದಲ್ಲ. ಆದರೆ, ನಿಮ್ಮ ಪಕ್ಷದಲ್ಲಿರುವವರು ಬಾಕಿ ಹಣವನ್ನು ಕೊಡದೇ ಧರಣಿಯಲ್ಲಿ ಬಂದಿದ್ದಾರೆಂದು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ:– ಮಾನ್ಯ ಉಪಾಧ್ಯಕ್ಷರೆ, ಕೇವಲ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿದರೆ ಸಾಲದು. ಇದಕ್ಕೆ ಏನಾದರೂ ಪರಿಹಾರ ಹುಡುಕಬೇಕಾಗಿದೆ. ನಿಗದಿತ ಸಮಯದಲ್ಲಿ 2200 ರೂಪಾಯಿ ಕೊಡಿಸುತ್ತೇವೆಂದು ಮತ್ತು ಮಾರ್ಚ್ ನಂತರ ಜೂನ್ ತಿಂಗಳೊಳಗೆ 2200 ರೂಪಾಯಿ ಕೊಡಿಸುತ್ತೇವೆಂದು ಬೆಳಗಾವಿ ಅಧಿವೇಶನದಲ್ಲಿ ತಾವು ಹೇಳಿದ್ದೀರಿ. ಆ ಸಂದರ್ಭದಲ್ಲಿ ನಾವೊಂದು ಸಲಹೆಯನ್ನು ಕೊಟ್ಟಿದ್ದೆವು. ಅದೇನೆಂದರೆ, ಕಬ್ಬು ಕಾರ್ಖಾನೆಗಳು ವಿದ್ಯುತ್ ಸರಬರಾಜು ಮಾಡಿರುವುದಕ್ಕೆ ಸಂಬಂಧಪಟ್ಟಂತೆ ಸರ್ಕಾರ ಏನು ವಿದ್ಯುತ್ ಬಿಲ್ ಅನ್ನು ಕೊಡಬೇಕಾಗಿದೆಯೋ ಅದನ್ನು ಕೊಡದೆ, ಆ ಹಣವನ್ನು ರೈತರ ಕಬ್ಬಿನ ಬಾಕಿಗೆ ಕೊಡಿ ಎಂದು ಹೇಳಿದ್ದೆವು. 2ನೇ ವಿಷಯ ಏನೆಂದರೆ, ಸಕ್ಕರೆ ಕಾರ್ಖಾನೆಗಳಿಗೆ ಕೊಡತಕ್ಕಂಥ concession ಈ ವರ್ಷ extension ಮಾಡಿದ್ದೀರಿ. ಕಳೆದ ವರ್ಷ Purchase Tax, Sales Tax, Entry Tax ಅನ್ನು concession ಕೊಟ್ಟಿದ್ದೀರಿ. ಈ concession ಅವರಿಗೆ ಕೊಡದೆ ಅವರಿಂದ tax ವಸೂಲ್ಮಾಡಿ ಆ ಹಣದಿಂದ ರೈತರ ಬಿಲ್ ಅನ್ನು ಪಾವತಿ ಮಾಡಿ ಎಂದು ನಾವು ಆಡಳಿತಾತ್ಮಕ ಸಲಹೆ ಕೊಟ್ಟಿದ್ದೇವೆ. ಸರ್ಕಾರ ಮನಸ್ಸು ಮಾಡಿದರೆ ಈ ತರಹದ ಹಲವಾರು ವಿಧಾನಗಳಿಂದ ರೈತರಿಗೆ ಕಬ್ಬಿನ ಬೆಲೆಯನ್ನು ಕೊಡಿಸುವುದಕ್ಕೆ ಸಾಧ್ಯವಿದೆ. ಈ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಿ ಎಂದು ನಾವು ಅವತ್ತೇ ಹೇಳಿದ್ದೇವೆ. ಅವರು ಕ್ರಮಗಳನ್ನು ತೆಗೆದುಕೊಂಡಿದ್ದರೆ ಬಹುತೇಕ ಇಷ್ಟು ಹೊತ್ತಿಗೆ ರೈತರ ಹಣ ಪಾವತಿ ಆಗುತ್ತಿತ್ತು. ಆದರೆ, ಇವತ್ತಿನ ದಿವಸ ರೈತರಿಗೆ ವಿಶ್ವಾಸ ಹೋಗಿರುವುದರಿಂದ ಈ ಪ್ರಶ್ನೆ ಬಂದಿದೆ. ನಿಮ್ಮ ಉತ್ತರ ಯಾರಿಗೂ ಕೂಡ ವಿಶ್ವಾಸ ಬಾರದ ರೀತಿಯಲ್ಲಿದೆ. ಇಲ್ಲಿ ಆ ಪಕ್ಷ ಈ ಪಕ್ಷ ಎಂಬ ಪ್ರಶ್ನೆ ಅಲ್ಲ. ಯಾರು ತಪ್ಪು ಮಾಡಿದ್ದಾರೆಯೋ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಒಟ್ಟಿನಲ್ಲಿ ಒಂದು ಸ್ಪಷ್ಟವಾದ ಸಂದೇಶ ಈ ರಾಜ್ಯಕ್ಕೆ ಹಾಗೂ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಒಮ್ಮೆ ಹೋಗಬೇಕು. ಸರ್ಕಾರ ನಿಗದಿ ಮಾಡಿರುವ SAP price ಅನ್ನು ಅನಿವಾರ್ಯವಾಗಿ ಆದರೂ

ಕೊಡಲೇಬೇಕಾಗುತ್ತದೆ ಎಂಬ ಸ್ಪಷ್ಟ ಸಂದೇಶ ಹೋಗಬೇಕು. ಇದನ್ನು ವಸೂಲಿ ಮಾಡಿಕೊಡುವುದಕ್ಕೆ ಸರ್ಕಾರಕ್ಕೆ ತನ್ನದೇ ಆದ ವಿಧಿ ವಿಧಾನಗಳಿವೆ ಇದೆ. ಆದ್ದರಿಂದ, ಆ ಕೆಲಸವನ್ನು ಮಾಡುತ್ತೇವೆಂಬ ಒಂದು ಸಂದೇಶ ಕಳುಹಿಸಿ, ಅದರ ಬಗ್ಗೆ ಕ್ರಮ ತೆಗೆದುಕೊಂಡರೆ ಖಂಡಿತ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಈ ಜನ ಸರ್ಕಾರದ ಮೇಲೆ ಆಗಲಿ ಅಥವಾ ವ್ಯವಸ್ಥೆ ಮೇಲಾಗಲಿ ವಿಶ್ವಾಸ ಕಳೆದುಕೊಳ್ಳುತ್ತಾರೆ.

ಶ್ರೀ ಗೋವಿಂದ ಎಂ. ಕಾರಜೋಳ:– ಸನ್ಮಾನ್ಯ ಉಪಾಧ್ಯಕ್ಷರೆ, ಕಳೆದ ಎರಡು ವರ್ಷಗಳಿಂದ 1000 ಕೋಟಿ ರೂಪಾಯಿ ಬಾಕಿ ಉಳಿಸಿಕೊಂಡಿದ್ದಾರೆ.

ಶ್ರೀ ಪಿ. ರಾಜೀವ್:– ಮಾನ್ಯ ಗೋವಿಂದ ಕಾರಜೋಳರವರೇ, ಒಟ್ಟು 1700 ಕೋಟಿ ರೂಪಾಯಿ ಬಾಕಿ ಉಳಿಸಿಕೊಂಡಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ:– ನಾನು ಇನ್ನೂ ಪೂರ್ಣ ಮಾಡಿಲ್ಲ. ಆ ವಿಷಯವನ್ನು ಸಹ ಹೇಳುತ್ತೇನೆ. ಕಳೆದ ಎರಡು ವರ್ಷದಿಂದ 1000 ಕೋಟಿ ಇಟ್ಟುಕೊಂಡಿದ್ದಾರೆ. ಈ ವರ್ಷದ್ದು 700 ಕೋಟಿ ರೂಪಾಯಿ ಸೇರಿ ಒಟ್ಟು 1700 ಕೋಟಿ ರೂಪಾಯಿ ಬಾಕಿ ಕೊಡಬೇಕಾಗಿದೆ. ಒಂದು ಕಾರ್ಖಾನೆಯವರು ಕೊಡುವುದಕ್ಕೆ ತಯಾರಿಲ್ಲ, ಅಲ್ಲದೆ ರೈತರಿಗೆ harassment ಸಹ ಮಾಡುತ್ತಿದ್ದಾರೆ. ನಿಮ್ಮ ಕಬ್ಬು ಸರಿಯಿಲ್ಲ, ನಿಮ್ಮ ಕಬ್ಬಿನಲ್ಲಿ ಹೊಸಲು ಇದೆ, ಸ್ವಚ್ಛ ಇಲ್ಲವೆಂದು 5% ನಿಂದ 8% ನವರೆಗೆ ಕಬ್ಬಿನ ತೂಕದಲ್ಲಿ ಕಟ್ ಮಾಡುತ್ತಿದ್ದಾರೆ. ಈ ವಿಚಾರ ಸರ್ಕಾರಕ್ಕೆ ಬಂದರೂ ಸಹ ಸರ್ಕಾರ ನಿದ್ದೆ ಮಾಡುತ್ತದೆ ಎಂದರೆ ಇದರ ಅರ್ಥ ಏನು? ಇವರಿಗೆ ಎಲ್ಲೋ ಒಂದು ಕಡೆ ರೈತರ ಪರ ಅನುಕಂಪ ಇಲ್ಲ. ರೈತರ ಬಗ್ಗೆ ಕಳಕಳಿ, ಕಾಳಜಿ ಇಲ್ಲ.

(ಗೊಂದಲ)

ಶ್ರೀ ಕೆ. ಶಿವಮೂತಿ:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ತಪ್ಪು ಮಾಹಿತಿಯನ್ನು ಸದನಕ್ಕೆ ಕೊಡುತ್ತಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಉಪಾಧ್ಯಕ್ಷರೆ, ನಾನು ಯೀಲ್ಡ್ ಆಗಿಲ್ಲ. ನಾನು ಹೇಳಿದ ಮೇಲೆ ಅವರು ಹೇಳಲಿ.

ಉಪಾಧ್ಯಕ್ಷರು:– ಮಾನ್ಯ ಶಿವಮೂರ್ತಿಯವರೇ ಅವರು ಮಾತನಾಡುತ್ತಿರುವಾಗ ನೀವೇಕೆ ಮಾತನಾಡುತ್ತೀರಿ? ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ಪ್ರಭಾಕರ್ ಕೋರೆ, ನಿರಾಣಿ, ಉಮೇಶ್ ಕತ್ತಿ ಮತ್ತು ಕೃಷ್ಣಾ ಎಸ್ಎಸ್ಕೆ ಈ ನಾಲ್ಕು ಜನ ಯಾವ ಪಕ್ಷದವರೆಂದು ಮತ್ತು ಇವರ ಹತ್ತಿರ ಇನ್ನೂ ಎಷ್ಟು arrears ಇದೆ ಎಂದು ದಯವಿಟ್ಟು ತರಿಸಿ. ಇವರೆಲ್ಲರೂ ಬಿಜೆಪಿ ಪಕ್ಷದವರಾಗಿದ್ದು, ಇವರೇ ಇನ್ನೂ ಕ್ಲಿಯರ್ ಮಾಡಿಲ್ಲ. ಆದ್ದರಿಂದ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಇಲ್ಲಿ ಧರಣಿ ಮಾಡುವುದಕ್ಕೆ ಇವರಿಗೆ ನೈತಿಕ ಹಕ್ಕು ಏನಿದೆ?

(ಗೊಂದಲ)

ಶ್ರೀ ಗೋವಿಂದ ಕಾರಜೋಳ:– ಮಾನ್ಯ ಉಪಾಧ್ಯಕ್ಷರೆ, ಸರ್ಕಾರದಿಂದ ಉತ್ತರ ಹೇಳುವುದಕ್ಕೆ ಇವರೇನಾದರು ಗುತ್ತಿಗೆ ಪಡೆದುಕೊಂಡಿದ್ದಾರೆಯೇ?

ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಿವಮೂರ್ತಿಯವರು ಮಾತನಾಡುತ್ತಾ ಇಂತಿಂಥವರು ಕೊಟ್ಟಿಲ್ಲ, ಅವರೆಲ್ಲ ನಿಮ್ಮ ಪಕ್ಷದವರೆಂದು ಹೇಳಿದರು. ಇಲ್ಲಿ ನಮ್ಮ ಪಕ್ಷ ನಿಮ್ಮ ಪಕ್ಷ ಎಂಬ ಪ್ರಶ್ನೆ ಅಲ್ಲ.

ಉಪಾಧ್ಯಕ್ಷರು:– ಇದು ಪಕ್ಷಾತೀತವಾಗಿ ಆಗಬೇಕು. ಯಾರ್ಯಾರು ಬಾಕಿ ಕೊಡಬೇಕಾಗಿದೆಯೋ ಅವರೆಲ್ಲರೂ ಸಹ ಕೊಡಲೇಬೇಕಾಗುತ್ತದೆ. ಇಲ್ಲಿ ಪಕ್ಷದ ಪ್ರಶ್ನೆ ಬರುವುದಿಲ್ಲ.

ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ:– ಇದರ ಬಗ್ಗೆ ಪಕ್ಷಾತೀತವಾಗಿ ಹೋರಾಟವನ್ನು ಮಾಡಿಕೊಂಡು ಬರಬೇಕು. ಇದರಲ್ಲಿ ರೈತರು ಸಹ ಇದ್ದಾರೆ. ಆದ್ದರಿಂದ, ಇವತ್ತಿನದಿವಸ ನಾವೆಲ್ಲರೂ ಸೇರಿಕೊಂಡು ಈ ಬಗ್ಗೆ ಕೇಳಬೇಕಾಗಿದೆ. ಯಾರು ಕೊಟ್ಟಿಲ್ಲವೋ ಅವರನ್ನು ಜೈಲಿಗೆ ಹಾಕತಕ್ಕಂಥ ತಾಕತ್ತು ಇಲ್ಲ. ಒಬ್ಬರನ್ನು ಜೈಲಿಗೆ ಹಾಕಿ ಇನ್ನೊಬ್ಬರನ್ನು ಬಿಡುವುದಕ್ಕೆ ಆಗುವುದಿಲ್ಲ. ಎಲ್ಲರನ್ನೂ ಸಹ ಹಾಕಬೇಕಾಗುತ್ತದೆ. ಅದಕ್ಕೆ ನಾನು ಏನು ಸಲಹೆ ಕೊಡುತ್ತೇನೆಂದರೆ, ಈ ಎಲ್ಲಾ ಕಾರ್ಖಾನೆಗಳು ವಿದ್ಯುತ್ ಅನ್ನು ಉತ್ಪಾದನೆ ಮಾಡಿ ಸರ್ಕಾರಕ್ಕೆ ಸರಬರಾಜು ಮಾಡುತ್ತಾರೆ. ಇದಕ್ಕೆ ಸರ್ಕಾರದಿಂದ ನೇರವಾಗಿ ಅವರಿಗೆ ಹಣ ಕೊಡುತ್ತಾರೆ. ನಾನು ಕೇಳತಕ್ಕಂಥದ್ದು ಏನೆಂದರೆ, ಇವರ ಹತ್ತಿರ ಕಾರ್ಖಾನೆಗಳ ಹಣ ಇದೆ. ಅದನ್ನು ಮೊದಲು ಮುಟ್ಟುಗೋಲು ಹಾಕಿಕೊಂಡು ಅವರಿಗೆ ಕೊಡಬೇಕಾಗಿರುವ ಹಣವನ್ನು ನೇರವಾಗಿ ರೈತರಿಗೆ ಕೊಡತಕ್ಕಂಥ ಕೆಲಸ ಮಾಡಬೇಕಾಗುತ್ತದೆ. ಉಮೇಶ್ ಕತ್ತಿ, ಕೋರೆಯವರ ಪ್ರಶ್ನೆ ಇಲ್ಲಿಲ್ಲ. ನಿಮ್ಮ ಕಡೆ ಇರುವವರ ಹೆಸರನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಾವು ಕೇಳತಕ್ಕಂಥದ್ದು ಏನೆಂದರೆ ರೈತರಿಗೆ ಬರಬೇಕಾಗಿರುವ ಹಣವನ್ನು ನೇರವಾಗಿ ಅಲ್ಲಿಂದ ಪಡೆದು ಕೊಡಿ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಉಪಾಧ್ಯಕ್ಷರೆ, ಪಂಚಾಯತ್‌ನವರು ಕೆಇಬಿ ಬಿಲ್ ಅನ್ನು ಪಾವತಿ ಮಾಡದಿದ್ದರೆ ಅವರಿಗೆ ಕೊಡಬೇಕಾಗಿರುವ ಗ್ರಾಂಟ್‌ನಿಂದ ಕಟ್ ಮಾಡಿ ಕೆಇಬಿ ಗೆ ಕೊಡುತ್ತಾರೆ. ಅದೇ ರೀತಿಯಲ್ಲಿ ಕಟ್ ಮಾಡಿ ರೈತರ ಬಿಲ್ ಕೊಡುವುದಕ್ಕೆ ಸರ್ಕಾರ ಮುಂದಾಗಬೇಕು. ಇವರಿಗೆ ರೈತರ ಬಗ್ಗೆ ಅನುಕಂಪ ಇಲ್ಲ. ಕೇವಲ ಸಕ್ಕರೆ ಕಾರ್ಖಾನೆಯ ಮಾಲೀಕರ ಸಕ್ಕರೆ ಸಿಹಿ ಇದೆ, ಅವರೇ ಬಹಳ ಸಿಹಿಯಾಗಿದ್ದಾರೆ ಎಂದು ಹೇಳಿದರೆ ನಮ್ಮದೇನೂ ತಕರಾರು ಇಲ್ಲ. ಇದನ್ನಾದರೂ ಒಂದು ಸಲ ಸ್ಪಷ್ಟವಾಗಿ ಹೇಳಲಿ. ಅಂದರೆ, ಸಕ್ಕರೆ ಕಾರ್ಖಾನೆಯ ಮಾಲೀಕರು ಬಹಳ ಸಿಹಿ ಆಗಿದ್ದಾರೆ. ಆದ್ದರಿಂದ, ಅವರ

ಸಿಹಿಗೆ ನಾವು ಕಹಿ ಹಾಕುವುದಕ್ಕೆ ಸಾಧ್ಯವಿಲ್ಲ ಆದ್ದರಿಂದ, ನಾವು ಅವರ ಪರವಾಗಿ ಇರುತ್ತೇವೆಂದು ಒಂದು ಸಲ ಹೇಳಿಬಿಡಲಿ, ಇದಕ್ಕೆ ನಮ್ಮದೇನೂ ತಕರಾರು ಇಲ್ಲ. ಇವತ್ತಿನದಿವಸ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಸಂಗದಲ್ಲಿದ್ದಾರೆ. ಆದ್ದರಿಂದ, ರೈತರ ಪರವಾಗಿ ಸರ್ಕಾರ ಪೇಮೆಂಟ್ ಮಾಡಿ ಆನಂತರ ಕಾರ್ಖಾನೆಗಳ ಮಾಲೀಕರಿಂದ ವಸೂಲ್ಮಾಡಲಿ.

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಉಪಾಧ್ಯಕ್ಷರೆ,

ಉಪಾಧ್ಯಕ್ಷರು:– ಮಾನ್ಯ ಶಿವಮೂರ್ತಿಯವರೆ, ತಾವು ಕುಳಿತುಕೊಳ್ಳಿ. ನೀವೇಕೆ ಉತ್ತರ ಕೊಡುತ್ತೀರಿ?

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಉಪಾಧ್ಯಕ್ಷರೆ, ಮುಂದೆ ಯಾರ್ಯಾರು ಮಂತ್ರಿಗಳು ಆಗುತ್ತಾರೆಯೋ ಅವರೆಲ್ಲರೂ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಉಪಾಧ್ಯಕ್ಷರೆ, ಇದನ್ನು ಪಕ್ಷಾತೀತವಾಗಿ ಮಾಡಬೇಕು. ಇಲ್ಲವೆಂದು ಹೇಳುವುದಿಲ್ಲ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಶಿವಮೂರ್ತಿಯವರೆ, ಮಾನ್ಯ ಸಿದ್ದರಾಮಯ್ಯನವರು ಸಕ್ಕರೆ ಕಾರ್ಖಾನೆಯ ಮಾಲೀಕರ ಕೈ ಹಿಡಿದುಕೊಂಡು ಬಂದು ಪಡೆದುಕೊಳ್ಳುತ್ತಾರೆ, ತಾವು ದಯವಿಟ್ಟು ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್. ಅಶೋಕ್:– ಮಾನ್ಯ ಉಪಾಧ್ಯಕ್ಷರೆ, ಪೇಪರ್ ಓದ ಬೇಡ ಎಂದರೂ ಸಹ ಮಾನ್ಯ ರೋಷನ್‌ಬೇಗ್‌ರವರು ಇಲ್ಲಿ ಕುಳಿತುಕೊಂಡು

ಪೇಪರ್ ಓದುತ್ತಿದ್ದಾರೆ. ವಿಷಯ ಏನೆಂದರೆ, ನಿನ್ನೆದಿವಸ ಮಾನ್ಯ ರೋಷನ್‌ಬೇಗ್‌ರವರ ಉತ್ತರವನ್ನು ಮಾನ್ಯ ಶಿವಮೂರ್ತಿಯವರೇ ಕೊಟ್ಟರು. ಇವತ್ತು ಕಬ್ಬಿನ ವಿಚಾರಕ್ಕೂ ಸಹ ಅವರೇ ಉತ್ತರ ಕೊಡುತ್ತಿದ್ದಾರೆ. ಅಂದರೆ, ನೀವು ಸರ್ಕಾರದ spokesman ಆಗಿದ್ದೀರಾ? ಉತ್ತರ ಕೊಡುವುದಾದರೆ ತಾವು ದಯವಿಟ್ಟು ಮುಂದೆ ಬನ್ನಿ.

ಶ್ರೀ ಎಂ. ಅಶೋಕ್‌ಪಟ್ಟಣ:– ನಾನು ಉತ್ತರ ಕೊಡುತ್ತಿಲ್ಲ. ಆದರೆ, ಕುಳಿತುಕೊಳ್ಳಿ ಎಂದರೆ ಕುಳಿತುಕೊಳ್ಳಬೇಕೆಂದರೆ ನಾವೇನು ಮಕ್ಕಳೇ?

ಶ್ರೀ ಜಗದೀಶ್ ಶೆಟ್ಟರ್:– ಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಆರ್. ಅಶೋಕ್:– ಮಕ್ಕಳಲ್ಲ. ಆದರೆ ಕೇಳುವುದಕ್ಕೆ ಸರ್ಕಾರ ಅವರನ್ನು ಬಿಟ್ಟಿದೆ.

ಮಂತ್ರಿಗಳಿಗೆ TA/DA, car ಗಳೆಲ್ಲವನ್ನೂ ಕೊಡುವುದರಿಂದ ಅವರು ಉತ್ತರವನ್ನು ಹೇಳಬೇಕು. ನೀವೆಲ್ಲಾ ಉತ್ತರ ಹೇಳುವುದು.

ಶ್ರೀ ಅಶೋಕ್ ಎಂ. ಪಟ್ಟಣ:– ಮಂತ್ರಿಗಳೇ ಉತ್ತರ ಕೊಡುತ್ತಾರೆ, ಉತ್ತರ ನಾನು ಕೊಡುತ್ತಿಲ್ಲ.

(ಗೊಂದಲ)

ಶ್ರೀ ಆರ್. ಅಶೋಕ್:– ಅವರನ್ನು ಮಂತ್ರಿಗಳನ್ನಾಗಿ ಮಾಡಿರುವುದು ಏತಕ್ಕೆ? ಅವರು oath ತೆಗೆದುಕೊಂಡಿರುವುದು ಏತಕ್ಕೆ?

ಶ್ರೀ ಅಶೋಕ್ ಎಂ. ಪಟ್ಟಣ:– ಸವದಿಯವರು ಏನು ಹೇಳಿದ್ದಾರೆ ಅದು ಬಹಳ correct ಆಗಿದೆ. ಮಂತ್ರಿಗಳು ಬರಲಿ clarification ಮಾಡಿ ಕುಳಿತುಕೊಂಡು decision ತೆಗೆದುಕೊಳ್ಳೋಣ. ಸಭೆ ನಡೆಯುವುದಕ್ಕೆ ಅನುಕೂಲ ಮಾಡಿಕೊಡಿ. ಮಂತ್ರಿಗಳು ಬಂದ ತಕ್ಷಣ ತಾವು ಮತ್ತೆ ಬಾವಿಗೆ ಬನ್ನಿ ಬೇಕಾದರೆ ಮತ್ತೆ ಶುರು ಮಾಡೋಣ. Time waste ಮಾಡಬೇಡಿ.

(ಗೊಂದಲ)

ಶ್ರೀ ಆರ್. ಅಶೋಕ್:– ನೀವು ಹೇಳಿದಾಗ ಬಾವಿಗೆ ಬರಬೇಕು ನೀವು ಹೇಳಿದಾಗ ಬಾವಿಯಿಂದ ಆಚೆ ಹೋಗಬೇಕಾ? ಬರೆದುಕೊಟ್ಟು ಬಿಡಿ ಯಾವ್ಯಾವಾಗ ಬರಬೇಕು ಬಾವಿಗೆ ಎಂದು.

ಶ್ರೀ ಅಶೋಕ ಎಂ. ಪಟ್ಟಣ:– ನಾನು ಕೇವಲ suggestion ಕೊಡುತ್ತಿದ್ದೇನೆ ಅಷ್ಟೇ. ಕಾರಜೋಳರವರು ಬರೀ ಕುಳಿತುಕೊಳ್ಳಿ ಎಂದು ಹೇಳುತ್ತಾರೆ ಅವರು ಮೇಷ್ಟ್ರು ಆಗಿ ಬಿಟ್ಟಿದ್ದಾರೆ ನಾವು ಏನು ಮಾಡೋಣ?.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–ಕಬ್ಬು ಬೆಳೆಗಾರರಿಗೆ ಹಣ ಕೊಡಬೇಕೋ ಕೊಡಬಾರದೋ?

ಶ್ರೀ ಅಶೋಕ್ ಎಂ. ಪಟ್ಟಣ:– ಕೊಡಬೇಕು, ನೀವು ಹೇಳಿದ್ದು correct ಆಗಿದೆ. ಕೆ.ಇ.ಬಿ.ಬಗ್ಗೆ ನೀವು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ. ಮುಖ್ಯಮಂತ್ರಿಗಳು ಬರಲಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ರೈತರಿಗೆ ಹಣ ಕೊಡಿಸೋಣ.

ಶ್ರೀ ಅಶೋಕ್ ಎಂ. ಪಟ್ಟಣ:– ಹೌದು, ನಾನು ಒಪ್ಪಿಕೊಳ್ಳುತ್ತಿದ್ದೇನೆ ನಾವು ವಿರೋಧ ಮಾಡುತ್ತಿಲ್ಲ. ಯಾವ ರೀತಿಯಾದರೂ ಕೊಡಿಸಲೇಬೇಕು, ನಾವು ರೈತರ ಪರವಾಗಿಯೇ ಇದ್ದೇವೆ.

(ಗೊಂದಲ)

ಉಪಾಧ್ಯಕ್ಷರು:– ಮಂತ್ರಿಗಳು ಏನು ಹೇಳುತ್ತಾರೆ ಕೇಳಿ.

ಶ್ರೀ ಜಗದೀಶ ಶೆಟ್ಟರ್:– ರೋಷನ್ ಬೇಗ್‌ರವರೇ, ನೀವು ಜವಾಬ್ದಾರಿ ತೆಗೆದುಕೊಳ್ಳುತ್ತೀರಾ?

ಶ್ರೀ ಆರ್. ರೋಷನ್ ಬೇಗ್:– ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ. ಸಂಬಂಧಪಟ್ಟ ಸಚಿವರು ಕೂಡ ಬರುತ್ತಾರೆ, ಈಗ ಅವರು ಸದನದ ಬಾವಿಯಿಂದ ವಾಪಸ್ಸು ಹೋಗಲಿ. ನಿಮಗೆ ಇನ್ನೇನು ಹೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅಲ್ಲಿಯವರೆಗೂ ಸ್ವಲ್ಪ ಹೊತ್ತು ಸದನವನ್ನು ಮುಂದಕ್ಕೆ ಹಾಕಿ.

ಒಬ್ಬ ಮಾನ್ಯ ಸದಸ್ಯರು:– ನೀವು ಹೇಳಿದಾಗ ಮುಂದಕ್ಕೆ ಹಾಕುವುದಾದರೆ ನಾವು ಕತ್ತೆ ಕಾಯುವುದಕ್ಕೆ ಇರುವುದಾ?

ಶ್ರೀ ಆರ್. ಅಶೋಕ್:– ಇಬ್ಬರೂ ಮೇಲ್ಮನೆಯಲ್ಲಿರುವುದರಿಂದ ಸ್ವಲ್ಪ ಹೊತ್ತು ಮುಂದಕ್ಕೆ ಹಾಕಿ.

ಶ್ರೀ ಕೆ. ಶಿವಮೂರ್ತಿ:– ನಾವು ರೈತರ ಪರವಾಗಿ ಇರುವವರು, ಹೋರಾಟ ಮಾಡಿರುವವರು. ಇತಿಹಾಸದಲ್ಲಿ ಮೊದಲ ಬಾರಿಗೆ ನಾವು ಬೆಂಬಲ ಬೆಲೆ ಘೋಷಣೆ ಮಾಡಿರುವುದು. ದ್ವಂದ್ವ ನೀತಿಯನ್ನು ಅನುಸರಿಸುವುದು ಬಿಜೆಪಿಯವರಿಗೆ ಇದು ಸರಿಯೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಜವಾಬ್ದಾರಿ ತೆಗೆದುಕೊಂಡು ಯಾವ ಒಬ್ಬ ಮಂತ್ರಿಗಳೂ action ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕೂ ತಯಾರಿಲ್ಲ.

ಉಪಾಧ್ಯಕ್ಷರು:– ಸುಮ್ಮನೇ ಕಲಾಪಕ್ಕೆ ಅಡ್ಡಿಯಾಗುತ್ತದೆ. ಇನ್ನೂ ಚರ್ಚೆ ಮಾಡುವ ವಿಷಯ ಇದೆ. ಡಾ॥ ಕಸ್ತೂರಿ ರಂಗನ್ ವರದಿ ಬಗ್ಗೆ ತಾವು ಮಾತನಾಡಬೇಕು. ಬಹಳಷ್ಟು ವಿಚಾರಗಳಿವೆ. ದಯವಿಟ್ಟು ಮುಂದಕ್ಕೆ ಹಾಕುವುದು ಬೇಡ.

(ಗೊಂದಲ)

ಶ್ರೀ ಅಶೋಕ್ ಎಂ. ಪಟ್ಟಣ:– ಹೇಳಿ ಕಳುಹಿಸಿದ್ದೇವೆ ಮುಖ್ಯಮಂತ್ರಿಗಳು ಬರುತ್ತಿದ್ದಾರೆ, ಅಲ್ಲಿಯವರೆಗೆ ಸ್ವಲ್ಪ ಸಹಕರಿಸಿ ನಾವು ರೈತರ ಪರವಾಗಿ ಇರುವುದು ವಿರೋಧವಾಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್:– Atleast ಮಂತ್ರಿಗಳು ಜವಾಬ್ದಾರಿ ತೆಗೆದುಕೊಂಡು ನಾವು recovery ಮಾಡಿಸಿ ಕೊಡುತ್ತೇವೆಂದು assurance ಕೊಡುವುದಕ್ಕೂ ತಯಾರಿಲ್ಲ.

ಉಪಾಧ್ಯಕ್ಷರು:– ಒಂದು ನಿಮಿಷ ನಾನು ಅವರಿಗೆ ಸೂಚನೆ ಕೊಡುತ್ತೇನೆ.

ಶ್ರೀ ಕೆ. ಷಡಾಕ್ಷರಿ:– Point of order ಹೇಳಿದ್ದಾರೆ ಕೊಡಿ.

ಶ್ರೀ ಜೆ.ಟಿ. ಪಾಟೀಲ್:– ಒಳಗಡೆ ಇದ್ದುಕೊಂಡು ಮಾತನಾಡುತ್ತಿದ್ದಾರೆ ಅವರಿಗೆ ಅವಕಾಶ ಮಾಡಿದರೆ ಹೇಗೆ? ಅವರು ಸದನದ ಬಾವಿಯಿಂದ ಹೊರಗಡೆ ಬಂದು ಮಾತನಾಡಲಿ. ಸದನದ ಬಾವಿಯ ಒಳಗಡೆ ಇದ್ದುಕೊಂಡು ಮಾತನಾಡುವುದು ಯಾವ ಸಭ್ಯತೆ ಇದು?.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಯಾರ್ಯಾರದ್ದು ಸಕ್ಕರೆ ಕಾರ್ಖಾನೆ ಇದೆ ಅವರಿಗೆ ಮಾತನಾಡುವುದಕ್ಕೆ ದಯವಿಟ್ಟು ಅವಕಾಶ ಕೊಡಬೇಡಿ. ದಯಮಾಡಿ ಯಾರು ಸಕ್ಕರೆ ಕಾರ್ಖಾನೆ ಮಾಲೀಕರಿದ್ದಾರೆ ಅವರು ಮಾತನಾಡಬಾರದು. ಜೆ.ಟಿ. ಪಾಟೀಲರಿಗೆ ವಿನಂತಿ ಮಾಡುತ್ತೇನೆ. ಅವರು ಸಕ್ಕರೆ ಕಾರ್ಖಾನೆ ಮಾಲೀಕರಿದ್ದಾರೆ.

ಉಪಾಧ್ಯಕ್ಷರು:– ದಯವಿಟ್ಟು ಒಂದು ನಿಮಿಷ ಕುಳಿತುಕೊಳ್ಳಿ.

ಶ್ರೀ ಜೆ.ಟಿ. ಪಾಟೀಲ್:– ನಾನು ಸಕ್ಕರೆ ಕಾರ್ಖಾನೆ ಮಾಲೀಕನೂ ಇಲ್ಲ, ಡೈರೆಕ್ಟರನೂ ಇಲ್ಲ. ಕಾರಜೋಳರವರೆ, ದಯಮಾಡಿ ಸದನಕ್ಕೆ ತಪ್ಪು ಮಾಹಿತಿ ಕೊಡಬೇಡಿ.

(ಗೊಂದಲ)

ಉಪಾಧ್ಯಕ್ಷರು:– ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸದನವನ್ನು 11 ಗಂಟೆ 22 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ 10 ನಿಮಿಷದ ನಂತರ ಸಮಾವೇಶಗೊಳ್ಳುವುದು)

(ಸದನವು ಪುನ: 11 ಗಂಟೆ 33 ನಿಮಿಷಕ್ಕೆ ಸಮಾವೇಶಗೊಂಡಾಗ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎನ್.ಹೆಚ್.ಶಿವಶಂಕರರೆಡ್ಡಿಯವರು ಅಧ್ಯಕ್ಷಪೀಠವನ್ನು ಅಲಂಕರಿಸಿದ್ದರು)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧಪಕ್ಷದ ನಾಯಕರು):– ಮಾನ್ಯ ಉಪಾಧ್ಯಕ್ಷರೆ, ಬಾಕಿ ಇರುವ 1,000 ಕೋಟಿ ರೂ.ಗಳನ್ನು ವಸೂಲಾತಿ ಮಾಡುತ್ತೇವೆ ಎಂದು ಸರ್ಕಾರದಿಂದ ಯಾರಾದರೂ ಒಬ್ಬರು ಸಚಿವರು ಸ್ಪಷ್ಟ ಭರವಸೆಯನ್ನು ಕೊಡಲಿ. ಸಂಬಂಧಪಟ್ಟ ಸಚಿವರು ಬರುವುದಿಲ್ಲ. ಯಾರಾದರೂ ಒಬ್ಬರು ಭರವಸೆ ಕೊಡಲಿ. Atleast ಕಬ್ಬು ಬೆಳೆಗಾರರಿಗೆ ಇದರಿಂದ ನಾವು ಏನಾದರೂ message ಕಳುಹಿಸಬಹುದು.

ಶ್ರೀ ಕೆ. ಶಿವಮೂರ್ತಿ:– ಎಷ್ಟು ವರ್ಷ ಜೀವಂತವಾಗಿರುತ್ತೇವೆ ಎಂದು ಭರವಸೆ ಕೊಡುವುದಕ್ಕಾಗುತ್ತದೆಯೇ?

ಉಪಾಧ್ಯಕ್ಷರು:– ಮಾನ್ಯ ಶಿವಮೂರ್ತಿಯವರೆ ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ನೀಡುತ್ತಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಇಂಧನ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ನಮ್ಮ ರಾಜ್ಯ ಸರ್ಕಾರ ರೈತರಿಗೆ ಹಣ ಕೊಡಿಸಬೇಕೆಂದು ಈಗಾಗಲೇ ಸಂಕಲ್ಪ ಮಾಡಿದ್ದೇವೆ. ಈಗಾಗಲೇ ನಮ್ಮ ಸಹಕಾರ ಸಚಿವರು ಯಾವ್ಯಾವ factory ಗೆ ಯಾವ್ಯಾವ ರೀತಿಯ ಕ್ರಮವನ್ನು ಕೈಗೊಂಡಿದ್ದಾರೆ ಎಂದು ಪ್ರತಿಯೊಂದು ತಿಳಿಸಿದ್ದಾರೆ. ನಮ್ಮ ಎರಡನೇ ಮಾತಿಲ್ಲ. ನಾವು

ಕಾನೂನಿನ, ಸರ್ಕಾರದ ಶಕ್ತಿ ಏನಿದೆ ಎಲ್ಲಾ ಬಳಸಿ, ವಿರೋಧಪಕ್ಷದ ಅನೇಕ ಸ್ನೇಹಿತರುಗಳಿಗೆ ಈ ಸಹಕಾರ ರಂಗದಲ್ಲಿ factory ಜವಾಬ್ದಾರಿ ಇದೆ. ಅವರೂ ಕೂಡ ಇದಕ್ಕೆ ಸಹಕಾರ ಕೊಡಬೇಕಾಗಿರುವುದು ಇಲ್ಲಿ ಬಹಳ ಅವಶ್ಯಕತೆ ಇದೆ. ನಾವು ಅವರು ಇಬ್ಬರೂ ಸೇರಿ ಕೂಡಿಸಿ ರೈತರಿಗೆ ಹಣವನ್ನು ಕೊಡಬೇಕು. ಆದರೆ ನಮಗೆ ಜವಾಬ್ದಾರಿ ಹೆಚ್ಚಿಗೆ ಇದೆ. ಈ ಕೆಲಸವನ್ನು ಆದಷ್ಟು ಬೇಗನೇ ನಾವು ಮಾಡುತ್ತೇವೆ. ದಯವಿಟ್ಟು ಸದನವನ್ನು ನಡೆಸಲು ಅವಕಾಶ ಮಾಡಿಕೊಡಬೇಕು. ಇನ್ನೊಂದು ತಿಂಗಳಿನೊಳಗಡೆ ರೈತರಿಗೆ ಎಲ್ಲಾ ಹಣವನ್ನು ಕೊಡಿಸಲು ನಾವು ಕ್ರಮವನ್ನು ಕೈಗೊಳ್ಳುತ್ತೇವೆ.

(ಗೊಂದಲ)

ಉಪಾಧ್ಯಕ್ಷರು:– ಮಾನ್ಯ ಸಚಿವರು ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಅವರ ಅಧಿಕಾರವನ್ನು ಉಪಯೋಗ ಮಾಡಿಕೊಂಡು ವಸೂಲಿ ಮಾಡಿಕೊಡಲಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಡಿ.ಕೆ. ಶಿವಕುಮಾರ್ ರವರು Enegry Department ನ Minister ಆಗಿದ್ದಾರೆ, ಅವರು cut ಮಾಡಿ ರೈತರದ್ದು ಕೊಡಲಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಅವರು ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. ಒಂದು ತಿಂಗಳಿನೊಳಗಾಗಿ ವಸೂಲಿ ಮಾಡಿ ಕೊಡಲಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– Factory ಯವರು co-gen ದುಡ್ಡು ಏನು ಕೊಡಬೇಕಾಗಿದೆ ಅದನ್ನು ರೈತರಿಗೆ ಕೊಡಲಿ. ಅವರಿಗೆ ಭರವಸೆ ಕೊಡಿ. Energy bill ಅನ್ನು ನೀವು factory ಗಳಿಗೆ ಕೊಡಬೇಕಾಗಿರುತ್ತದೆ. ದಯವಿಟ್ಟು ಅದನ್ನು ಡಿ.ಸಿ ಗಳ ಮುಖಾಂತರ ಬಿಡುಗಡೆ ಮಾಡಿ. ರೈತರಿಗೆ payment ಮಾಡುವಂತೆ ಹೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನಾಳೆಯೇ ಮಾಡಿ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್:– ನಾನು ಈಗ ಹೇಳುತ್ತಿದ್ದೇನೆ. ಕಾರ್ಖಾನೆಯವರು sugar ಅನ್ನು collect ಮಾಡುವುದು ಬೇರೆ. Energy bill ಏನಿದೆ ಅದನ್ನು stop ಮಾಡಿ deviate ಮಾಡಿಸುತ್ತೇವೆ.

ಉಪಾಧ್ಯಕ್ಷರು:– ಆಯಿತು, ಈಗ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾನ್ಯ ಲೋಬೋರವರು ಮಾತನಾಡುವುದು. 15 ನಿಮಿಷದಲ್ಲಿ ಮಾತನಾಡಿ ಮುಗಿಸಿ.

ಶ್ರೀ ಪಿ. ರಾಜೀವ್:– ಮಾನ್ಯ ಉಪಾಧ್ಯಕ್ಷರೆ, ನಾನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

ಉಪಾಧ್ಯಕ್ಷರು:– ಕುಳಿತುಕೊಳ್ಳಿ. ಮಾನ್ಯ ಲೋಬೋರವರನ್ನು ಮಾತನಾಡಲು ಕರೆದಿದ್ದೇನೆ. ನಿಲುವಳಿ ಸೂಚನೆ ಬರುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ನನಗೆ ಅವಕಾಶ ಕೊಡಿ.

ಉಪಾಧ್ಯಕ್ಷರು:– ತಮಗೂ ಅವಕಾಶ ಕೊಡುತ್ತೇನೆ. ಕುಳಿತುಕೊಳ್ಳಿ.

ಶ್ರೀ ಜೆ.ಆರ್. ಲೋಬೋ:– ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಅರ್ಪಿಸುವ ಪ್ರಸ್ತಾವದ ಮೇಲೆ ಮಾತನಾಡಲು ಅವಕಾಶ ಕೊಟ್ಟಿರುವಂತಹ ತಮಗೆ ನಾನು ಧನ್ಯವಾದಗಳನ್ನು ಹೇಳುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಉಪಾಧ್ಯಕ್ಷರೆ, ನಮಗೆ ಮಾತನಾಡಲು ಅವಕಾಶ ಕೊಡಿ.

ಉಪಾಧ್ಯಕ್ಷರು:– ಮಾನ್ಯ ಲೋಬೋರವರು ಮಾತನಾಡಿದ ನಂತರ ನಿಮ್ಮ sideಗೆ ಅವಕಾಶ ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಈಗ ನಮ್ಮ side ಗೆ ಅವಕಾಶ ಕೊಡಬೇಕು. Rotation ಪ್ರಕಾರ ಇವತ್ತು ನಮಗೆ ಬರಬೇಕು. ಆನಂತರ ಅವರಿಗೆ ಕೊಡಿ.

ಉಪಾಧ್ಯಕ್ಷರು:– ಮಾನ್ಯ ಲೋಬೋರವರು ಮಾತನಾಡಿದ ಮೇಲೆ ನಿಮಗೇ ಅವಕಾಶ ಕೊಡುತ್ತೇನೆ. ತಾವು ಅರ್ಥ ಮಾಡಿಕೊಳ್ಳಬೇಕು. ಇವತ್ತು ರಾಜ್ಯಪಾಲರ ಭಾಷಣದ ಮೇಲೆ ಒಂದೂವರೆ ಗಂಟೆಯವರೆಗೂ ಚರ್ಚೆಯಾಗುತ್ತದೆ. ಎಲ್ಲರೂ 15 ನಿಮಿಷ ಮಾತನಾಡಬೇಕು. ಇಲ್ಲವಾದರೆ ಕಷ್ಟವಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ:– ಮೊದಲನೇ ಅವಕಾಶ ನಮಗೆ ಕೊಡಿ.

ಉಪಾಧ್ಯಕ್ಷರು:– ಇಲ್ಲ ಮಾನ್ಯ ಲೋಬೋರವರದ್ದು ಮಾತನಾಡುವುದು ಆಗಲಿ.